**ಆಯುಕ್ತರು**
**ಕಾರ್ಮಿಕ ಇಲಾಖೆ**

**ಕರ್ನಾಟಕ ಸರ್ಕಾರ**

**"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್,**
**ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.**
**ಕಛೇರಿ:080 2975 3078**
**ಇಮೇಲ್ :** labour.commissioner42@gmail.com

**ಸಂಖ್ಯೆ:** ಕೆಎಸ್‌ಸಿಎಲ್‌ಇಪಿಎಸ್/ಸಿಎಲ್-07/ಸಿಆರ್-10/2023-24 **ದಿನಾಂಕ:**13/06/2023

**: ಕಛೇರಿ ಆದೇಶ :**

**ವಿಷಯ:** ಬೆಂಗಳೂರು ನಗರ ಸರ್ಕಲ್‌ಗಳು ಹಾಗೂ ರಸ್ತೆ ಬದಿಗಳಲ್ಲಿ ಭಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳನ್ನು ರಕ್ಷಣೆ ಮಾಡಲು ಕಾರ್ಯಪಡೆ (Task Force) ಯನ್ನು ರಚಿಸುವ ಕುರಿತು.

**ಉಲ್ಲೇಖ:** ದಿನಾಂಕ:10/06/2023ರಂದು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಸರ್ಕಲ್‌ಗಳು ಹಾಗೂ ರಸ್ತೆ ಬದಿಗಳಲ್ಲಿ ಭಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳು ಕಂಡುಬರುತ್ತಿದ್ದು, ಶಿಕ್ಷಣದಿಂದ ವಂಚಿತರಾಗಿರುವುದನ್ನು ಕಾಣಬಹುದಾಗಿದೆ. ಅಂತಹ ಮಕ್ಕಳನ್ನು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986, ಬಾಲಕ ನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000, ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 ಹಾಗೂ ಇತರೆ ಅನ್ವಯಿಸುವ ಕಾಯ್ದೆಗಳಡಿ ಕ್ರಮ ತೆಗೆದುಕೊಂಡು ಮಕ್ಕಳಿಗೆ ಶಿಕ್ಷಣ ಒದಗಿಸುವುದರ ಮೂಲಕ ಮುಖ್ಯವಾಹಿನಿಗೆ ತರುವುದು ಆದ್ಯ ಕರ್ತವ್ಯವಾಗಿರುತ್ತದೆ.

ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರಲ್ಲದೆ ಬೆಂಗಳೂರು ನಗರ ಸರ್ಕಲ್‌ಗಳಲ್ಲಿ ಭಿಕ್ಷೆ ಬೇಡುವ ಹಾಗೂ ರಸ್ತೆ ಬದಿಗಳಲ್ಲಿ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳು ಕಂಡುಬಂದಿದು, ಅವರು ಶಿಕ್ಷಣದಿಂದ ವಂಚಿತರಾಗಿರುವುದನ್ನು ಕಂಡುಬಂದಿರುತ್ತದೆ. ಅಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಅವಶ್ಯಕವಾಗಿರುತ್ತದೆ. ಇದೂ ಕೂಡ ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಈ ಕುರಿತು ಕಾರ್ಮಿಕ ಅಧಿಕಾರಿಗಳು, ಉಪ ವಿಭಾಗ-01 ರಿಂದ 07 ಇವರು ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಹಿರಿಯ ಕಾರ್ಮಿಕ ನಿರೀಕ್ಷಕರುಗಳು, ಕಾರ್ಮಿಕ ನಿರೀಕ್ಷಕರುಗಳು ಹಾಗೂ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಕಾರ್ಯಪಡೆಯ ತಂಡಗಳನ್ನು ರಚಿಸಿ, ಬೆಂಗಳೂರು ನಗರ ಸರ್ಕಲ್‌ಗಳಲ್ಲಿ ಭಿಕ್ಷೆ ಬೇಡುವ ಹಾಗೂ ರಸ್ತೆ ಬದಿಗಳಲ್ಲಿ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳ ಕುರಿತಾಗಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಅಂತಹ ಮಕ್ಕಳನ್ನು ರಕ್ಷಣೆ ಮಾಡಿ ಪುನರ್ವಸತಿಗೊಳಿಸಿ, ಅವರು ಶಿಕ್ಷಣವನ್ನು ನಿಲ್ಲಿಸಿದ್ದರೆ ಅವರನ್ನು ಮುಖ್ಯವಾಹಿನಿಗೆ ಸೇರಿಸಿ ಅವರ ಶಿಕ್ಷಣವನ್ನು ಮುಂದುವರೆಕೆಗೆ ಅವಕಾಶ ಮಾಡಿಕೋಡುವುದು ಅವಶ್ಯಕವಿರುತ್ತದೆ.

ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಕಾರ್ಮಿಕ ಅಧಿಕಾರಿಗಳು, ಉಪ ವಿಭಾಗ–01 ರಿಂದ 07 ಅವರ ಕಾರ್ಯವ್ಯಾಪ್ತಿಯ ಕಾರ್ಯಪಡೆಯನ್ನು ರಚಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಕಾರ್ಯಪಡೆಯ ತಂಡ(Task Force)**

| ತಂಡಗಳು | ಕಾರ್ಮಿಕ ಅಧಿಕಾರಿಗಳು ಹಾಗೂ ಅವರ ತಂಡದ ವಿವರ |
|---|---|
| ತಂಡ–1 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–01 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–01, 02, 10, 25, 27, 30 ಮತ್ತು 45ನೇ ವೃತ್ತ ಬೆಂಗಳೂರು. |
| ತಂಡ–2 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–02 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–12, 26, 28, 33, 34, 39, 48, ಮತ್ತು 49ನೇ ವೃತ್ತ ಬೆಂಗಳೂರು. |
| ತಂಡ–3 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–03 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–05, 15, 29, 36, 44, ಮತ್ತು 46ನೇ ವೃತ್ತ ಬೆಂಗಳೂರು. |
| ತಂಡ–4 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–04 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–08, 19, 21, 23, 32, 37, 41, ಮತ್ತು 42ನೇ ವೃತ್ತ ಬೆಂಗಳೂರು. |
| ತಂಡ–5 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–05 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–03, 06, 07 16, 24, 31 ಮತ್ತು 40ನೇ ವೃತ್ತ ಬೆಂಗಳೂರು. |
| ತಂಡ–6 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–06 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–14, 18, 35 ಮತ್ತು 38ನೇ ವೃತ್ತ ಬೆಂಗಳೂರು ಮತ್ತು ಕಾರ್ಮಿಕ ನಿರೀಕ್ಷಕರು, ಆನೇಕಲ್ ವೃತ್ತ |
| ತಂಡ–7 | ಕಾರ್ಮಿಕ ಅಧಿಕಾರಿ, ಉಪ ವಿಭಾಗ–07 ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ವೃತ್ತ–04, 09, 11, 13, 17, 20, 22 ಮತ್ತು 43ನೇ ವೃತ್ತ ಬೆಂಗಳೂರು. |

ಮೇಲ್ಕಂಡ ತಂಡಗಳು ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು.

**ಕರ್ತವ್ಯಗಳು:–**

1. ತಂಡಗಳು ಆಯಾ ಕಾರ್ಯವ್ಯಾಪ್ತಿಯ ಸರ್ಕಲ್‌ಗಳಲ್ಲಿ, ರಸ್ತೆ ಬದಿಗಳಲ್ಲಿ ಬಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳನ್ನು ಗುರುತಿಸುವುದು.
2. ಪ್ರತಿ ತಿಂಗಳು 15 ದಿನಗಳಿಗೊಮ್ಮೆ ಅಂದರೆ ಮೊದಲನೇಯ ಹಾಗೂ ಮೂರನೇ ಶನಿವಾರದಂದು ಕಡ್ಡಾಯವಾಗಿ ತಂಡಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
3. ಬಿಕ್ಷಾಟನೆ ಮತ್ತು ಮಾರಾಟದಲ್ಲಿ ತೊಡಗಿರುವ ಮಕ್ಕಳನ್ನು ರಕ್ಷಣೆ ಮಾಡಿ ಅವರನ್ನು ಮುಖ್ಯವಾಹಿನಿ ಶಾಲೆಗೆ ದಾಖಲಿಸುವುದು ಹಾಗೂ ಮಕ್ಕಳ ಕಲ್ಯಾಣ ಸಮಿತಿ(CWC) ಗೆ ದಾಖಲಿಸಲು ಕ್ರಮ ವಹಿಸುವುದು ಹಾಗೂ ಪುನರ್ವಸತಿಗೊಳಿಸುವುದು.

4. ಮಕ್ಕಳ ಸಹಾಯವಾಣಿ–1098, ಕಾರ್ಮಿಕರ ಸಹಾಯವಾಣಿ–155214, E-mail Id: kscleps@gmail.com, ಸಾಮಾಜಿಕ ಜಾಲತಾಣಗಳಾದ Twitter ID: https://twitter.com/ChildState ಗಳ ಮೂಲಕ ದೂರುಗಳು ಹಾಗೂ ಮಾಹಿತಿಗಳು ಸ್ವೀಕೃತಿವಾದ ಸಂದರ್ಭದಲ್ಲಿ ಅನಿರೀಕ್ಷಿತ ದಾಳಿಗಳನ್ನು ನಡೆಸಿ, ಮಕ್ಕಳನ್ನು ರಕ್ಷಿಸಿ, ಪುನರ್ವಸತಿಗೊಳಿಸಲು ನಿಯಮಾನುಸಾರ ಕ್ರಮವಹಿಸುವುದು.
5. ಪ್ರತಿ ತಿಂಗಳು ಎರಡನೇ ಹಾಗೂ ಮೂರನೇ ಸೋಮವಾರದಂದು ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಹಾಗೂ ಸದರಿ ವರದಿಗಳನ್ನು ಆಯಾ ಕಾರ್ಯವ್ಯಾಪ್ತಿಯ ಉಪ ಕಾರ್ಮಿಕ ಆಯುಕ್ತರು ದೃಢೀಕರಿಸಿ ಕೇಂದ್ರ ಕಛೇರಿಯ ಪ್ರಚಾರ ಮತ್ತು ಅಂಕಿ ಅಂಶ ಶಾಖೆಗೆ ಸಲ್ಲಿಸುವುದು ಹಾಗೂ ಕಾರ್ಮಿಕ ಆಯುಕ್ತರ ಗಮನಕ್ಕೆ ತರುವುದು.

**ಆಯುಕ್ತರು**
ಕಾರ್ಮಿಕ ಇಲಾಖೆ

**ಇವರಿಗೆ,**

1. ಕಾರ್ಮಿಕ ಅಧಿಕಾರಿ, ಉಪವಿಭಾಗ–01, ಬೆಂಗಳೂರು
2. ಕಾರ್ಮಿಕ ಅಧಿಕಾರಿ, ಉಪವಿಭಾಗ–02, ಬೆಂಗಳೂರು
3. ಕಾರ್ಮಿಕ ಅಧಿಕಾರಿ, ಉಪವಿಭಾಗ–03, ಬೆಂಗಳೂರು
4. ಕಾರ್ಮಿಕ ಅಧಿಕಾರಿ, ಉಪವಿಭಾಗ–04, ಬೆಂಗಳೂರು
5. ಕಾರ್ಮಿಕ ಅಧಿಕಾರಿ, ಉಪವಿಭಾಗ–05, ಬೆಂಗಳೂರು
6. ಕಾರ್ಮಿಕ ಅಧಿಕಾರಿ, ಉಪವಿಭಾಗ–06, ಬೆಂಗಳೂರು
7. ಕಾರ್ಮಿಕ ಅಧಿಕಾರಿ, ಉಪವಿಭಾಗ–07, ಬೆಂಗಳೂರು

**ಪ್ರತಿಯನ್ನು,**

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ–01 ಹಾಗೂ 02, ಬೆಂಗಳೂರು.
3. ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ–1, 2, 3 ಹಾಗೂ 4, ಬೆಂಗಳೂರು